**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಬೇಲೂರು**

**ಸಿ.ಸಿ.ಸಂಖ್ಯೆಃ329/2026**

**ಫಿರ್ಯಾದುದಾರರು** ಃ ಹಳೇಬೀಡು ಪೋಲೀಸರು

ವಿರುದ್ಧ

**ಆರೋಪಿ** ಃ ಶ್ರೀ ಮಂಜೇಗೌಡ ಬಿನ್ ಅಡಗೂರೇಗೌಡ,
ವಯಸ್ಸು ಸುಮಾರು **55** ವರ್ಷ,
ವಾಸಃ ಅಡಗೂರು ಗ್ರಾಮ,
ಮಾದಿಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ.

- - - -

:: ಆಪಾದನೆ ::

ದಿನಾಂಕಃ **03.06.2026** ರಂದು ಸಂಜೆ **4.30** ಗಂಟೆಯಲ್ಲಿ ಚಾಸಾ-**1** ರವರಿಗೆ ಬಂದ ಮಾಹಿತಿ ಮೇರೆಗೆ ಹಳೇಬೀಡು ಪೊಲೀಸ್ ಠಾಣಾ ವ್ಯಾಪ್ತಿಯ ಅಡಗೂರು ಗ್ರಾಮದಲ್ಲಿ ಚಾಸಾ-**2** ರಿಂದ **6** ರವರೊಂದಿಗೆ ದಾಳಿ ನಡೆಸಿದಾಗ ಆರೋಪಿಯಾದ ನೀವು ಯಾವುದೇ ರಹದಾರಿ ಹೊಂದದೇ ನಿಮ್ಮ ಅಂಗಡಿಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ **90** ಎಂ.ಎಲ್ ನ ಒರಿಜಿನಲ್ ಚಾಯ್ಸ್ **10** ಪ್ಯಾಕೇಟ್ ಗಳು ಮದ್ಯವನ್ನು, **4** ಖಾಲಿ ಪ್ಲಾಸ್ಟಿಕ್ ಲೋಟಗಳು ಹಾಗೂ ಒಂದು ನೀರಿನ ಪ್ಲಾಸ್ಟಿಕ್ ಬಾಟಲಿಯನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಕುಡಿಯಲು ಅನುವು ಮಾಡಿಕೊಡುತ್ತಿದ್ದು, ಅದರನ್ವಯ ಕರ್ನಾಟಕ ಅಬಕಾರಿ ಕಾಯ್ದೆ ಕಲಂ. **15(ಎ)** ಮತ್ತು **32(3)** ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯಲದ ಸಂಜ್ಞೆತೆಯಲ್ಲಿ ಎಸಗಿರುತ್ತೀರಿ.

ಈ ಮೇಲ್ಕಂಡ ಆರೋಪಗಳ ಬಗ್ಗೆ ನಿಮ್ಮನ್ನು ವಿಚಾರಣೆಗೆ ಗುರುಪಡಿಸಲು ಈ ಮೂಲಕ ನಿರ್ದೇಶಿಸಿರುತ್ತೇನೆ.

ಪ್ರಶ್ನೆಃ 1- ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ನಿಮಗೆ ಅರ್ಥವಾಯಿತೇ?
ಉತ್ತರಃ

ಪ್ರಶ್ನೆಃ 2- ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಮೇಲ್ಕಂಡ ಎಲ್ಲಾ ಆಪಾದನೆಯನ್ನು ನನ್ನ ಸಮಕ್ಷಮ ಓದಿ ಹೇಳಿ, ಆರೋಪಿಃಆರೋಪಿಯ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.)

ದಿನಾಂಕಃ **08.06.2026**

ಸ್ಥಳಃ ಬೇಲೂರು.

(ಶ್ರೀ ನಾಗೇಂದ್ರ)

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ

ಜೆ.ಎಂ.ಎಫ್.ಸಿ., ಬೇಲೂರು.